ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಮಂಗಳವಾರ, ದಿನಾಂಕ : 23ನೇ ಜುಲೈ, 2019

ಶಾಲೆಗಳಿಗೆ ಅಕ್ಕಿ ಬೇಳೆಗಳನ್ನು ನೀಡದಿರುವ ಕುರಿತು

ಶ್ರೀ ರವಿಕುಮಾರ್. ಎನ್ (ವಿಧಾನಸಭೆಯಿಂದ ಚುನಾಯಿತರಾದವರು) :-

532 (495) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಶಾಲೆಗಳು ಪ್ರಾರಂಭವಾಗಿ ತಿಂಗಳುಗಳೇ ಕಳೆದರೂ ಇದುವರೆವಿಗೂ ಅಕ್ಷರ ದಾಸೋಹಕ್ಕೆ ಅಕ್ಕಿ, ಬೇಳೆಯನ್ನು ಶಾಲೆಗಳಿಗೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; 2019-20ರ ಶೈಕ್ಷಣಿಕ ಸಾಲಿನಿಂದ ಅಕ್ಷರ ದಾಸೋಹವನ್ನು ನಿಲ್ಲಿಸುವ ಯೋಚನೆ ಸರ್ಕಾರದ ಮಟ್ಟದಲ್ಲಿದೆಯೇ;

(ಆ) ಶಾಲೆಗಳು ಪ್ರಾರಂಭವಾಗಿ ತಿಂಗಳುಗಳೇ ಕಳೆದರೂ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಮಕ್ಕಳ ಅಕ್ಷರ ದಾಸೋಹಕ್ಕಾಗಿ ಅಕ್ಕಿ ಬೇಳೆ ಸರಬರಾಜು ಮಾಡಲು ಟೆಂಡರ್ ಕರೆಯದಿರಲು ಕಾರಣವೇನು; ಶಾಲೆಗಳಿಗೆ ಕಳೆದ 3 ತಿಂಗಳಿನಿಂದ ಪಡಿತರ ನೀಡದಿರಲು ಕಾರಣವೇನು;

(ಇ) ರೈತ ಪರ ಎನ್ನುವ ಸರ್ಕಾರವು ರೈತರ ಮಕ್ಕಳನ್ನು ಉಪವಾಸ ಕೆಡುವುತ್ತಿರುವ ಬಗ್ಗೆ ಸರ್ಕಾರದ ನಿಲುವೇನು; ಶಾಲೆಗಳಿಗೆ ಅಕ್ಕಿ ಮತ್ತು ಬೇಳೆ ಸರಬರಾಜು ಮಾಡಲು ಯಾವ ಕಾಲಮಿತಿಯೊಳಗೆ ಟೆಂಡರ್ ಕರೆಯಲಾಗುವುದು ?